**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ., ನ್ಯಾಯಾಲಯ,**

**ತಿ.ನರಸೀಪುರ**

## ಸಿಸಿ ನಂ. 1317/2025

**ಪಿರ್ಯಾದುದಾರರು** : ಶಂಕರಯ್ಯ,
ಬಿನ್ ಲೇಟ್ ಚಿಕ್ಕಮೂಗಯ್ಯ, 72 ವರ್ಷ,
ವಾಸಃ ಆರ್.ಹೊಸಕೆರೆ, ಕೆ.ಇ.ಬಿ ರಸ್ತೆ,
ಬನ್ನೂರು ಟೌನ್, ಟಿ.ನರಸೀಪುರ ತಾಲ್ಲೂಕು.

**ವಿರುದ್ಧ**

**ಆರೋಪಿ** : ಬಿ.ಸಿ.ಗೋಪಾಲ,
ಬಿನ್ ಬಿ.ಕೆ.ಚಿಕ್ಕಸ್ವಾಮಿ, 60 ವರ್ಷ,
ವಾಸಃ ವಾರ್ಡ್ ನಂ.13, ಬನ್ನೂರು ಟೌನ್,
ಟಿ.ನರಸೀಪುರ ತಾಲ್ಲೂಕು..

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ರೀತ್ಯಾ ಆರೋಪಿ ರವರ ಹೇಳಿಕೆ**

ಪ್ರಶ್ನೆಃ 1 ನೀವು ಈ ಪ್ರಕರಣದಲ್ಲಿ ವಿಚಾರಣೆ ಮಾಡಿದ ಸಾಕ್ಷಿಯ ಹೇಳಿಕೆಯನ್ನು ಕೇಳಿ ಅರ್ಥ ಮಾಡಿಕೊಂಡಿರುವಿರಾ?

ಉತ್ತರಃ

ಪ್ರಶ್ನೆಃ 2 ಫ್ರಾಸಾ.1 - ಶಂಕರಯ್ಯರವರು ತಮ್ಮ ಮುಖ್ಯ ವಿಚಾರಣಾ ಸಮಯದಲ್ಲಿ ನೀವು ಅವರಿಂದ ಕುಟುಂಬದ ತುರ್ತು ಅವಶ್ಯಕತೆಗಳಿಗಾಗಿ ದಿನಾಂಕ 10.03.2025 ರಂದು ರೂ.2,00,000/-ಗಳ ಹಣವನ್ನು ಕೈ ಸಾಲವಾಗಿ ಪಡೆದು, ಸದರಿ ಹಣವನ್ನು ವಾಪಸ್ಸು ನೀಡುತ್ತೇನೆಂದು ಒಪ್ಪಿಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ?

ಉತ್ತರಃ

ಪ್ರಶ್ನೆಃ 3 ಫ್ರಾಸಾ.1 - ರವರು ಮುಂದುವರೆದು, ಆ ನಂತರ ಫ್ರಾಸಾ-1 ರವರಿಗೆ ನೀವು ಅದಕ್ಕೆ ಬದಲಾಗಿ ರೂ.2,00,000/- ಗಳಿಗೆ ಕರ್ನಾಟಕ ಬ್ಯಾಂಕಿನ,

ಬನ್ನೂರು ಶಾಖೆಯ ದಿನಾಂಕ 12.05.2025 ರ ಚೆಕ್ ಸಂಖ್ಯೆ 747829 ನ್ನು ನಿಪಿ–1 ರಂತೆ ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ?

ಉತ್ತರಃ

ಪ್ರಶ್ನೆಃ 4 ಫ್ರಾಸಾ.1 - ರವರು ಮುಂದುವರೆದು, ಸದರಿ ಚೆಕ್ಕನ್ನು ಫ್ರಾಸಾ–1 ರವರು ತಮ್ಮ ಖಾತೆ ಹೊಂದಿರು ಕರ್ನಾಟಕ ಬ್ಯಾಂಕ್, ಬನ್ನೂರು ಶಾಖೆಗೆ ನಗದೀಕಿಸಲು ಸಲ್ಲಿಸಿದಾಗ ಸದರಿ ಚೆಕ್ ನಗದೀಕೃತವಾಗದೆ "**Fund Insufficient**" ಎಂದು ನಿಪಿ–2 ರಂತೆ ದಿನಾಂಕ 13.05.2025 ರಂದು ಹಿಂಬರಹದೊಂದಿಗೆ ವಾಪಸ್ಸಾಗಿ ಬಂದಿದೆ ಎಂಬುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ?

ಉತ್ತರಃ

ಪ್ರಶ್ನೆಃ 5 ಫ್ರಾಸಾ.1 - ರವರು ಮುಂದುವರೆದು, ನೀವು ಹಣವನ್ನು ವಾಪಸ್ಸು ನೀಡದೆ ಇದ್ದಾಗ ಪಿರ್ಯಾದುದಾರರು ನಿಮ್ಮ ವಿರುದ್ಧ ನಿಪಿ–3 ರಂತೆ ದಿನಾಂಕ 16.05.2025 ರಂದು ವಕೀಲರ ನೋಟೀಸನ್ನು ಕಳುಹಿಸಿದ್ದು, ಅದು ನಿಮಗೆ ದಿನಾಂಕ 23.05.2025 ರಂದು ಜಾರಿಯಾಗಿದ್ದು, ಉದ್ದೇಶಪೂರ್ವಕವಾಗಿ ನೀವು ಅವರಿಗೆ ನೀಡಬೇಕಾದ ಹಣವನ್ನು ನೀಡದೆ ತಪ್ಪಿಸಿಕೊಳ್ಳಲು ಸದರಿ ಚೆಕ್ಕನ್ನು ದುರುದ್ದೇಶದಿಂದ ನೀಡಿರುತ್ತೀರಿ ಎಂಬುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ?

ಉತ್ತರಃ

ಪ್ರಶ್ನೆಃ 6 ಫ್ರಾಸಾ.1 - ರವರು ಮುಂದುವರೆದು, ಒಂದು ಅಂಚೆ ರಶೀದಿಯನ್ನು ನಿಪಿ–4 ಎಂದು, ಒಂದು ಅಂಚೆ ಸ್ವೀಕೃತಿಯನ್ನು ನಿಪಿ–5 ಎಂದು ಗುರುತಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ?

ಉತ್ತರಃ

ಪ್ರಶ್ನೆ: 7 ನಿಮಗೆ ಈ ಪ್ರಕರಣದಲ್ಲಿ ಏನಾದರೂ ಹೇಳುವುದು ಇದೆಯೆ ?

ಉತ್ತರಃ

ಪ್ರಶ್ನೆ: 8 ನಿಮ್ಮ ಪರವಾಗಿ ಯಾವುದಾದರೂ ಸಾಕ್ಷ್ಯಗಳನ್ನು ಹಾಜರು ಪಡಿಸುವಿರೇ?

ಉತ್ತರಃ

(ಆರೋಪಿಗೆ ತಿಳಿಯುವ ಭಾಷೆಯಲ್ಲಿ ಪ್ರಶ್ನಿಸಿ ನಂತರ ಆತನು ಕೊಟ್ಟ ಉತ್ತರವನ್ನು ಯಥವತ್ತಾಗಿ ದಾಖಲು ಮಾಡಲಾಯಿತು.)

ದಿನಾಂಕಃ 08.01.2026

ಸ್ಥಳಃ ತಿ.ನರಸೀಪುರ.

**ಪ್ರಧಾನ ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.,**
**ತಿ. ನರಸೀಪುರ.**

**<u>ಆರೋಪಿ ಸಹಿಃ</u>**